## ಪ್ರಬಂಧ ವಿಶೇಷ

ನಾನು ಮದುವೆಯಾಗಿ ಹೋದ ಮೇಲೆ, ಕೆಲವು ವರ್ಷಗಳ ನಂತರ ನಾವು ಕಟ್ಟಿಕೊಂಡ ಹೊಸ ಮನೆಯಲ್ಲಿ ಜಗುಲಿಗೂ ಅಡಿಗೆಮನೆಗೂ ಇದ್ದದ್ದು ಒಂದು ತೆಳ್ಳನೆಯ ಗೋಡೆ ಮಾತ್ರ. ಅಡಿಗೆಮನೆಯ ವಿಶಾಲ ಕಿಟಕಿಯಿಂದ ನಿಂತಲ್ಲೇ ಹೊರಗಿನ ಆಕಾಶ ಗುಡ್ಡ ಬೆಟ್ಟ, ಸೂರ್ಯ ಚಂದ್ರ ನಕ್ಷತ್ರಗಳೆಲ್ಲವೂ ಕಾಣುತ್ತಿದ್ದವು. ಬೆಳಗಿನ ಸೂರ್ಯನ ಬೆಳಕು ನೇರವಾಗಿ ಅಡಿಗೆಮನೆಗೇ ತೂರಿಬರುತ್ತಿತ್ತು. ಜಗುಲಿಯಲ್ಲಿ ಇರುವವರೊಂದಿಗೆ ಮಾತಾಡುತ್ತಲೇ ಅಡಿಗೆ ಮಾಡಿ ಮುಗಿಯುತ್ತಿತ್ತು. ಒಲೆ ಮೇಲೆ ಕುಕ್ಕರ್ ಇಟ್ಟು ಆರಾಮಾಗಿ ಜಗುಲಿಯಲ್ಲಿ ಟೀವಿ ನೋಡುತ್ತಾ ಕೂರಬಹುದಿತ್ತು. ಅಡಿಗೆಮನೆಯಿಂದ ಹೆಬ್ಬಾಗಿಲವರೆಗೂ ಯಾವುದೇ ಬಾಗಿಲು ಹೊಸ್ತಿಲುಗಳಿಲ್ಲದೆ ಎಲ್ಲಾ ನೇರ... ನಿಚ್ಚಳ!

ನಗರದ ಆಧುನಿಕ ಅಪಾರ್ಟ್‌ಮೆಂಟ್‌ನಲ್ಲಿರುವ ನನ್ನ ಮಗಳ ಮನೆಯಲ್ಲಿ, ಹಾಲಿಗೂ ಕಿಚನ್ನಿಗೂ ಮಧ್ಯ ಗೋಡೆಗಳೇ ಇಲ್ಲ. ಹಾಲಿನ ಮುಂದುವರೆದ ಭಾಗವೇ ಅಡಿಗೆಮನೆ. ಗ್ಯಾಸ್ ಮೇಲೆ ಕುಕ್ಕರ್ ಇಟ್ಟು ಹಾಲಿನ ಸೋಫಾ ಮೇಲೆ ಲ್ಯಾಪ್‌ಟಾಪ್ ಆನ್ ಮಾಡಿ ಕುಳಿತ ಮಗಳು, 'ಏಯ್... ಅಲ್ಲೇ ಸ್ವಲ್ಪ ಗ್ಯಾಸ್ ಆಫ್ ಮಾಡು' ಎಂದು ಗಂಡನಿಗೆ ಕೂಗಿ ಹೇಳುತ್ತಾಳೆ. ಮಗಳಿಗಿಂತ ಅಳಿಯ ಆಫೀಸಿಂದ ಬೇಗ ಬಂದರೆ ಅವನೇ ಕುಕ್ಕರ್‌ನಲ್ಲಿ ಅನ್ನ ಬೇಳೆ ಇಟ್ಟಿರುತ್ತಾನೆ. ಅಥವಾ ಅಡಿಗೆ ಮಾಡಲು ಮನಸ್ಸಿರದಿದ್ದರೆ ಒಂದು ಆನ್‌ಲೈನ್ ಆರ್ಡರಿಗೋ, ಒಂದು ಫೋನ್ ಕಾಲಿಗೋ ಊಟ ಮನೆ ಬಾಗಿಲಿಗೇ ಬಂದಿರುತ್ತದೆ. ಇಲ್ಲಿ ಅಡಿಗೆಮನೆ, ಜಗುಲಿ ಎನ್ನುವ ಭೇದವೇ ಅಳಿಸಿಹೋಗಿದೆ.

ಯಾರಿಗೆ ಗೊತ್ತು... ಇಂದಿನ ಆಧುನಿಕ ವಾಸ್ತುಶಾಸ್ತ್ರದ ಸ್ಮಾರ್ಟ್ ಕಿಚನ್‌ನ ಪರಿಕಲ್ಪನೆಯಲ್ಲಿ ಅಡಿಗೆಮನೆ ಮನೆಯ ಯಾವ ಭಾಗದಲ್ಲಿ ಯಾವ ರೂಪದಲ್ಲಿ ಬಂದು ಕೂರುತ್ತದೆಯೋ! ಅಥವಾ ಮುಂದೊಂದು ದಿನ ಮನೆಯಿಂದ ಅಡಿಗೆಮನೆಯೇ ಮಾಯವಾದರೂ ಆಗಬಹುದೇನೋ!

ಅಂದಿನ ಕಪ್ಪಡಿಗೆಮನೆಯಲ್ಲಿದ್ದ ಬಿಳಿಮಂಡೆಯ ರಾಕ್ಷಸಿಯೇನಾದರೂ ಈ ನಗರಗಳ ಮನೆಗೆ ಬಂದರೆ ಅವಿತು ಕೊಳ್ಳಲು ಕಪ್ಪಡಿಗೆಮನೆ ಬಿಡಿ, ಅಡಿಗೆಮನೆಯೇ ಕಾಣದೆ ಬಂದ ದಾರಿಗೆ ಸುಂಕವಿಲ್ಲದೇ ಪಲಾಯನ ಮಾಡುವುದು ಖಂಡಿತ! ಜೊತೆಗೆ ಆ ಕಪ್ಪಡಿಗೆಮನೆಗಳಲ್ಲಿ ಬೆಳಕು ಕಾಣದೇ ಹೊಗೆ ಹಿಡಿದು ಕಪ್ಪಾದ ಅಜ್ಜಿ ಮುತ್ತಜ್ಜಿಯರ ಆತ್ಮಗಳು ಇಂದಿನ ಈ ಅಡಿಗೆಮನೆಗಳಿಗೆ ಬಂದರೆ ಬೆರಗಿನಿಂದ ಮೂಗಿನ ಮೇಲೆ ಬೆರಳಿಡುತ್ತಾರೋ ಅಥವಾ ತಮಗಿಲ್ಲದ ಬೆಳಕಿನ ಭಾಗ್ಯವ ನೆನೆದು ನಿಟ್ಟುಸಿರಿಡುತ್ತಾರೋ...

ಯಾರಿಗೆ ಗೊತ್ತು!

**ಚಂದ್ರಿಕಾ ಹೆಗಡೆ ಮತ್ತಿಹಳ್ಳಿ**

ಗೃಹಿಣಿಯಾಗಿರುವ ಚಂದ್ರಿಕಾ ಹೆಗಡೆ ಪ್ರಸ್ತುತ ನೆಲಮಂಗಲ ಸಮೀಪದ ಚಿಕ್ಕಮಾರನಹಳ್ಳಿಯಲ್ಲಿ ನೆಲೆಸಿದ್ದಾರೆ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಮತ್ತಿಹಳ್ಳಿ ಎಂಬ ಊರಿನವರು. ಕತೆ, ಕವಿತೆ, ಪ್ರಬಂಧ ಮತ್ತು ಮಕ್ಕಳ ಕತೆ, ಕವನಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.